ಓಎಸ್ 233/2021

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 16.08.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿಗಳ ಪರ ಶ್ರೀ ಎಂ.ಬಿ. ವಕೀಲರಿಂದ**

ದಾವ ಐಟಂ ನಂಃ 2 ರ ಸ್ವತ್ತನ್ನು ಖರೀದಿಸಿ ಇವತ್ತಿಗೆ 28 ವರ್ಷಗಳು ಕಳೆದಿವೆ ಎಂದರೆ ಸರಿ. ನಾನು ಸದರಿ ಸ್ವತ್ತನ್ನು ಖರೀದಿಸಿದಾಗ ನನ್ನ ಅಣ್ಣ ಪುಟ್ಟಸ್ವಾಮಪ್ಪ ಜೀವಂತ ಇದ್ದರು ಎಂದರೆ ಸರಿ. ನನ್ನ ಅಣ್ಣ ಜೀವಂತ ಇದ್ದಾಗ ನಾವು ಒಟ್ಟು ಕುಟುಬಂದಲ್ಲಿ ಇದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ ಒಟ್ಟು ಕುಟುಬಂದಲ್ಲಿದ್ದು ಮನೆಯ ವ್ಯವಹಾರವನ್ನು ನಾನೇ ಮಾಡುತ್ತಿದ್ದೆ ಎಂದರೆ ಸುಳ್ಳು. ದಾವ ಐಟಂ ನಂಃ 2 ರ ಸ್ವತ್ತನ್ನು ಬೆಟ್ಟಳ್ಳಿ ಗೌಡಿಕೆ ಸಿದ್ದಪ್ಪ ರವರಿಂದ ಖರೀದಿಸಿದ್ದೇನೆ. ಸದರಿ ಗೌಡಿಕೆ ಸಿದ್ದಪ್ಪ ರವರು ನನ್ನ ತಾಯಿ ಕೆಂಪಮ್ಮ ರವರ ತಂದೆ ಎಂದರೆ ಸುಳ್ಳು, ಸಾಕ್ಷಿ ಮುಂದುವರೆದು ಅವರೆ ಬೇರೆ ಜನ ನಾವೇ ಬೇರೆ ಜನ ಎಂದು ನುಡಿಯುತ್ತಾರೆ. ಸದರಿ ಗೌಡಿಕೆ ಸಿದ್ದಪ್ಪ ರವರು ಸರ್ವೇ ನಂಬರ್ 59 ರ 5 ಎಕರೆ 35 ಗುಂಟೆ ಆಸ್ತಿಯ ಪೈಕಿ 2 ಎಕರೆ 37 ಗುಂಟೆ ಆಸ್ತಿಯನ್ನು ದೇವಿರಮ್ಮ ಬಿನ್ ಚಂದ್ರಪ್ಪ ರವರ ಹೆಸರಿಗೆ ದಾನಪತ್ರ ಮಾಡಿದ್ದಾರೆ ಎಂದರೆ ಸುಳ್ಳು . ಉಳಿಕೆ 2 ಎಕರೆ 37½ ಗುಂಟೆ ಜಮೀನನ್ನು ಗೌಡಿಕೆ ಸಿದ್ದಪ್ಪ ರವರು ಬೆಟ್ಟಹಳ್ಳಿ ಗ್ರಾಮದ ವೀರೆಗೌಡ ಬಿನ್ ಮಾದೇಗೌಡ ರವರಿಗೆ ಭೋಗ್ಯ ಮಾಡಿದ್ದರು ಎಂದರೆ ಸುಳ್ಳು. ಸದರಿ ಭೋಗ್ಯದ ಹಣವನ್ನು ಗೌಡಿಕೆ ಸಿದ್ದಪ್ಪ ರವರು ತಿರುವಳಿ ಮಾಡಲು ಆಗದೇ ಕಾರಣ ನಾವು ನಮ್ಮ ಒಟ್ಟು ಕುಟುಂಬದ ಆಸ್ತಿಯ ಆದಾಯದಿಂದ ಸದರಿ ಭೋಗ್ಯ ತಿರುವಳಿ ಮಾಡಿ ಆ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ ಎಂದರೆ ಸುಳ್ಳು. ಸದರಿ ಕ್ರಯವಾದ ನಂತರ ದಾವ ಐಟಂ ನಂಃ 1 ಮತ್ತು 2 ರ ಆಸ್ತಿಯಲ್ಲಿ ನಾವುಗಳೆಲ್ಲರೂ ಒಟ್ಟು ಕುಟುಬಂದಲ್ಲಿ ಇದ್ದು ಬೇಸಾಯ ಮಾಡಿಕೊಂಡು ಹೋಗುತ್ತಿದ್ದೆವು ಎಂದರೆ ಸರಿಯಲ್ಲ.

2. ದಾವ ಐಟಂ ನಂಃ 2 ರ ಆಸ್ತಿ ಕ್ರಯಪತ್ರವಾದ 2 ವರ್ಷಗಳ ನಂತರ ನನ್ನ ಅಣ್ಣ ಪುಟ್ಟಸ್ವಾಮಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಪುಟ್ಟಸ್ವಾಮಿ ಮೃತ ಪಟ್ಟನಂತರ ಅವರ ಹೆಂಡತಿ ಮಕ್ಕಳಾದ 7 ರಿಂದ 9ನೇ ಪ್ರತಿವಾದಿಗಳು ದಾವ ಐಟಂ ನಂಃ 2 ರ ಸ್ವತ್ತಿನಲ್ಲಿ ಭಾಗ ಬರಬೇಕೆಂದು ಕೇಳಿರುತ್ತಾರೆ ಎಂದರೆ ಸರಿ. ನಂತರದಲ್ಲಿ ನಾನು ಓಎಸ್ 83/2001 ರಂತೆ 7 ರಿಂದ 9 ನೇ ಪ್ರತಿವಾದಿಗಳ ವಿರುದ್ಧ ದಾವೆ ದಾಖಲಿಸಿದ್ದೆ ಎಂದರೆ ಸಾಕ್ಷಿಯು ಅವರು ನನಗೆ ತಕರಾರು ಮಾಡಿದ್ದರು ಹಾಕಿದ್ದೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು ಈ

ಓಎಸ್ 233/2021

ಡಿಡಬ್ಲ್ಯೂ 1

ದಾವೆಯ ದಾವ ಐಟಂ ನಂಃ 2ನ ಸ್ವತ್ತನ್ನು ಗೌಡಿಕೆ ಸಿದ್ದಪ್ಪ ರವರು ನಮ್ಮ ಪೂರ್ವಿಕರಿಂದ ಖರೀದಿಸಿದ್ದರು ಎಂದು ಬರೆಸಿ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ನಾನು ಮಾಲಿಕತ್ವ ಕೋರಿ ದಾಖಲಿಸಿರಲಿಲ್ಲ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ಮಾತ್ರ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಆ ದಾವ ಆಸ್ತಿಯ ಮಾಲಿಕ ಎಂದು ಎಲ್ಲಿಯೂ ಬರೆಸಿಲ್ಲ ಎಂದರೆ ಸರಿಯಲ್ಲ. ದಾವ ಐಟಂ ನಂಃ 2 ನೇ ಸ್ವತ್ತನ್ನು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿಸಿರುವ ಕಾರಣ ವಾದಿ ಮತ್ತು ಎಲ್ಲ ಪ್ರತಿವಾದಿಗಳಿಗೂ ದಾವ ಐಟಂ ನಂಃ 1 ಮತ್ತು 2 ರ ಮೇಲೆ ಹಕ್ಕು ಇದೆ ಎಂದರೆ ಸುಳ್ಳು. ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವಂತೆ ದಾವ ಐಟಂ ನಂಃ 1ನೇ ಸ್ವತ್ತು ವಿಭಾಗವಾಗಿಲ್ಲ ಮತ್ತು ಈಗೂಲು ಸಹ ಒಟ್ಟು ಕುಟುಬಂದಲ್ಲಿ ಇದೆ ಎಂದರೆ ಸುಳ್ಳು. ನಾನು ನನ್ನ ಪ್ರಮಾಣ ಪತ್ರ ದಲ್ಲಿ ಬಟ್ಟೆ ವ್ಯಾಪಾರ ಮತ್ತು ಗಣಪತಿ ದೇವಸ್ಥಾನದ ಅರ್ಚಕ ವೃತ್ತಿಯಿಂದ ಬಂದ ಆದಾಯದಲ್ಲಿ ದಾವ ಐಟಂ ನಂಃ 2ನೇ ಸ್ವತ್ತನ್ನು ಖರೀದಿಸಿರುತ್ತೇನೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ದಾವ ಐಟಂ ನಂಃ 2ನೇ ಸ್ವತ್ತಿಗೆ ನಾನು ಒಬ್ಬನೇ ಮಾಲೀಕನಲ್ಲ ಮತ್ತು ಅದು ಒಟ್ಟು ಕುಟುಬಂದ ಸ್ವತ್ತು ಎಂದರೆ ಸರಿಯಲ್ಲ.

3. ನಿಡಿ-3ನ್ನು ದಾವೆಗೋಸ್ಕರ ಸೃಷ್ಟಿಸಿಕೊಂಡು ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳಾದ ನಾವು ಚಂದ್ರಪ್ಪರವರ ಮಕ್ಕಳಾಗಿದ್ದು ಯಾವತ್ತು ಆಸ್ತಿಗಳನ್ನು ವಿಭಾಗಮಾಡಿಕೊಳ್ಳದ ಕಾರಣ ದಾವ ಆಸ್ತಿಗಳಲ್ಲಿ ವಾದಿ ಮತ್ತು ಪ್ರತಿವಾದಿಗಳೆಲ್ಲರಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ವಿಭಾಗವಾಗಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸದೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ